ಖುಷಿ ಹಾಗೂ ರಮ್ಯ ತಮ್ಮ ಎಂದಿನ ಹರಟೆಯಲ್ಲಿ ತೊಡಗಿದ್ದರೆ ಕಲಾವತಿ ಹಾಡೊಂದನ್ನು ಗುನುಗಿಕೊಳ್ಳುತ್ತಾ ಕುಳಿತರು. ಪುರುಷೋತ್ತಮರು ಮೌನವಾಗಿ ಡ್ರೈವ್ ಮಾಡತೊಡಗಿದ್ದರು.

ಸ್ವಲ್ಪ ಹೊತ್ತಿಗೆಲ್ಲಾ ಲಾಲ್‌ಬಾಗಿನಲ್ಲಿತ್ತು ಪುರುಷೋತ್ತಮರ ಕುಟುಂಬ. ಅಲ್ಲಿನ ಹಸಿರನ್ನು ನೋಡಿ ಕಲಾವತಿಯ ಮನಸ್ಸು ಗರಿಗೆದರಿತು.

'ನಿಮಗೆ ನೆನಪಿದ್ಯಾ, ನಾವು ಖುಷಿ ಹಾಗೂ ಭರತರನ್ನ ಕರ್ಕೊಂಡು ಎಷ್ಟೋ ಸಾರಿ ಇಲ್ಲಿಗೆ ಬಂದಿದ್ವಿ ಅಲ್ವಾ?....ಆಗೆಲ್ಲಾ ಅವ್ರು ಬಹಳ ಚಿಕ್ಕೋರು..' ಕಲಾವತಿಯೆಂದಾಗ ಪುರುಷೋತ್ತಮರೂ ತಲೆಯಾಡಿಸಿದರು.

ಭಾನುವಾರವಾದ್ದರಿಂದ ಲಾಲ್‌ಬಾಗಿನಲ್ಲಿ ಜನರೂ ಸಾಕಷ್ಟು ಸಂಖ್ಯೆಯಲ್ಲಿದ್ದರು. ಅಲ್ಲಿನ ಸೊಬಗನ್ನು ನೋಡಿ ಎಲ್ಲರಿಗೂ ಸಂತೋಷವಾಯಿತು. ಲಾಲ್‌ಬಾಗಿನ ತಾವರೆಕೊಳ, ಹೂವಿನ ಗಡಿಯಾರ, ಗಾಜಿನಮನೆ, ಮತ್ಸ್ಯಾಗಾರ, ಗುಲಾಬಿ ತೋಟ ಮುಂತಾದವುಗಳನ್ನು ಸುತ್ತು ಹಾಕಿದ್ದಾಯಿತು. ತನ್ನ ಡಿಜಿಟಲ್ ಕ್ಯಾಮೆರಾದಲ್ಲಿ ಕಣ್ಣಿಗೆ ಅಂದವಾಗಿ ಕಂಡ ದೃಶ್ಯಗಳನ್ನು ಕ್ಲಿಕ್ಕಿಸುತ್ತಿದ್ದಳು ಖುಷಿ.

ಈ ದಿನ ವಾತಾವರಣವೂ ಚೇತೋಹಾರಿಯಾಗಿತ್ತು. ಅಷ್ಟೊಂದು ಬಿಸಿಲಿಲ್ಲದ, ಮೋಡ ಕವಿದ ವಾತಾವರಣವಿತ್ತು.

ಅಲ್ಲಿನ ಬೃಹತ್ ಬಂಡೆಯನ್ನೇರಿ ಅಲ್ಲೆಲ್ಲಾ ಒಂದಷ್ಟು ತಿರುಗಾಡಿದರು. ಎಲ್ಲರೂ ಒಂದೆಡೆ ಆರಾಮಾಗಿ ಕುಳಿತು ಮಾತಿನಲ್ಲಿ ತೊಡಗಿದರು.

'ಅಂಕಲ್, ಲಾಲ್‌ಬಾಗ್ ಇಷ್ಟು ಚೆನ್ನಾಗಿದೆ ಅಂತ ನಾನು ಅಂದುಕೊಂಡೇ ಇರ್ಲಿಲ್ಲ, ನಾನು ಚಿಕ್ಕವಳಾಗಿದ್ದಾಗ ಯಾವಾಗ್ಲೋ ಅಪ್ಪಾಜಿಯ ಜೊತೆ ಬಂದ ನೆನಪು...' ಖುಷಿಯಲ್ಲಿ ಹೇಳಿದಳು ರಮ್ಯ.

'ಹೌದು ರಮ್ಯ, ಈ ಲಾಲ್‌ಬಾಗ್ ಪ್ರಕೃತಿ ಸೌಂದರ್ಯದ ಗಣಿ, ಜೊತೆಗೆ ಬೆಂಗಳೂರಿನ ಎಲ್ಲ ಏಳುಬೀಳುಗಳಿಗೂ, ಅಭಿವೃದ್ಧಿಗಳಿಗೂ ಇದು ಸಾಕ್ಷಿಯಾಗುತ್ತಾ ಬಂದಿದೆ. ನೀನೇ ನೋಡಿದ್ಯಲ್ಲ ಇಲ್ಲಿನ ಮರಗಳನ್ನು. ಇಲ್ಲಿನ ಬೃಹತ್ ವೃಕ್ಷ ಸಮೂಹ, ಇಲ್ಲಿನ ವನಸ್ಪತಿ ಗಿಡಗಳು, ಇಲ್ಲಿನ ಹೂ ಗಿಡಗಳು, ಅಸಂಖ್ಯ ಪಕ್ಷಿಗಳು ಇಲ್ಲಿಗೆ ಬರುವವರನ್ನು ಆಕರ್ಷಿಸುತ್ತಲೇ ಇರುತ್ತವೆ. ನಾವೀಗ ಕುಳಿತಿರುವ ಬಂಡೆ ಇದ್ಯಲ್ಲಾ, ಇದು ಅಂತಿಂಥ ಬಂಡೆ ಅಲ್ಲ. ಇದು ಜಗತ್ತಿನ ಅತಿ ಹಳೆಯ ಬಂಡೆಗಳಲ್ಲಿ ಒಂದು ಎಂದು ಹೆಸರು ಮಾಡಿದೆ. ಅಂದಾಜು 3000 ಮಿಲಿಯನ್ ವರ್ಷಗಳಷ್ಟು ಪುರಾತನವಾದ ಈ ಬೃಹತ್ ಬಂಡೆ ಕರ್ನಾಟಕದ, ಅಷ್ಟೇ ಏಕೆ ಭಾರತದ ಸಂಪತ್ತು ಕೂಡಾ ಹೌದು...' ಪುರುಷೋತ್ತಮರು ಲಾಲ್‌ಬಾಗನ್ನು ವರ್ಣಿಸತೊಡಗಿದ್ದರು.

'ಆದ್ರೆ ಪಪ್ಪ, ಎಷ್ಟೊಂದು ವಿಷ್ಯಗಳನ್ನು ತಿಳ್ಕೊಂಡಿದ್ದೀರಿ ನೀವು ಲಾಲ್‌ಬಾಗಿನ ಬಗ್ಗೆ...' ಮೆಚ್ಚುಗೆಯ ಮಾತನ್ನಾಡಿದಳು ಖುಷಿ.

'ಖುಷಿ....ನಾನು ಲಾ ಸ್ಟೂಡೆಂಟ್ ಆಗಿದ್ದಾಗ ಇಲ್ಲೇ ಹತ್ತಿರದಲ್ಲೇ ಬಾಡಿಗೆ ರೂಮಿನಲ್ಲಿದ್ದೆ, ಬೇಜಾರಾದಾಗಲೆಲ್ಲಾ ಇಲ್ಲಿಗೆ ಬರ್ತಿದ್ದೆ, ಹಾಗಾಗಿ ಒಂದಷ್ಟು ವಿಷಯಗಳನ್ನು ತಿಳಿದುಕೊಳ್ಳುವ ಅವಕಾಶ ಸಿಕ್ತು, ಈ ಬಂಡೆಯ ಮೇಲಿನ ಕಾವಲು ಗೋಪುರ ಇದ್ಯಲ್ಲಾ ಖುಷಿ, ಇದು ಬೆಂಗಳೂರು ನಗರವನ್ನು ನಿರ್ಮಾಣ ಮಾಡಿದ ಕೆಂಪೇಗೌಡರ ಕಾಲದ್ದು. ಆಗಿನಿಂದ ಈಗಿನವರೆಗೆ ಈ ಲಾಲ್‌ಬಾಗ್ ತನ್ನನ್ನು ವಿಶಿಷ್ಟವಾಗಿ ಗುರುತಿಸಿಕೊಳ್ಳುತ್ತಲೇ ಬಂದಿದೆ. ನಾಡಿನಲ್ಲಿ ತೋಟಗಾರಿಕೆಗೆ ಹೊಸದಿಕ್ಕನ್ನು ತೋರಿಸಿದ ಕೀರ್ತಿಯೂ ಇದಕ್ಕೇ ಸಿಗಬೇಕು...' ಎಂದರು ಪುರುಷೋತ್ತಮರು.

'ಹೌದು ಪಪ್ಪ, ನೀವು ಹೇಳುವುದು ಸರಿ. ಕೆಂಪೇಗೌಡರಿಂದ ನಿರ್ಮಾಣವಾದ ಈ ಬೆಂಗಳೂರು ಈಗ ಸಾಕಷ್ಟು ಬೆಳೆದಿದೆ. ಒಂದು ಕಡೆ ಸಿಲಿಕಾನ್ ಸಿಟಿ ಅಂತ ಅನ್ನಿಸಿಕೊಂಡಿದ್ರೂ ಮತ್ತೊಂದು ಕಡೆ ಕರಗ, ಕಡ್ಲೆಕಾಯಿ ಪರಿಶೆಯಂತಹ ಜಾನಪದ ಹಬ್ಬಗಳು ನಡೆಯುತ್ತವೆ ಇಲ್ಲಿ. ಈಗೀಗ ಅಪರಾಧಗಳು ಹೆಚ್ಚುತ್ತಿರಬಹುದು, ಆದ್ರೆ ಅವೆಲ್ಲವನ್ನೂ ಕೊಡವಿಕೊಂಡು ತನ್ನತನದಲ್ಲಿ ಗುರುತಿಸಿಕೊಳ್ಳುವ ಶಕ್ತಿ ಈ ಬೆಂಗಳೂರಿಗಿದೆ....' ಎಂದಳು ಖುಷಿ.

'ನಾವು ನಿಜಕ್ಕೂ ಕೆಂಪೇಗೌಡರನ್ನು ಈ ಹೊತ್ತಿನಲ್ಲಿ ನೆನೆಯಬೇಕು ಖುಷಿ. ಕೆಂಪೇಗೌಡರೇನೂ ದೊಡ್ಡ ಅರಸರಲ್ಲ, ವಿಜಯನಗರದ ಅರಸರ ಸಾಮಂತ ಪಾಳೆಯಗಾರರಾಗಿದ್ದವರು ಅವರು. ಆದರೂ ಅವರ ದೇಶಭಕ್ತಿ, ಸ್ವಾಮಿನಿಷ್ಠೆ ಎಂಥವರನ್ನೂ ಬೆರಗಾಗಿಸುತ್ತಿತ್ತಂತೆ. ಗವಿಪುರ ಹಾಗೂ ಶಿವಗಂಗೆಯ ದೇವಾಲಯಗಳು ಅವರ ಕಾಲದಲ್ಲೇ ಆಗಿದ್ದು ಎಂದು ಕೇಳಿದ್ದೇವೆ, ಅವರು ಕಟ್ಟಿದ ಬೆಂಗಳೂರೆಂಬ ಪುಟ್ಟ ನಗರ ಈಗ ಬೃಹದಾಕಾರವಾಗಿ ಬೆಳೆದು ನಿಂತಿದೆ....ಆಲದ ಮರದ ಹಾಗೆ. ಅಪ್ಪಾಜಿ ಆಗಾಗ ಈ ವಿಷಯಗಳನ್ನೆಲ್ಲಾ ಹೇಳುತ್ತಲೇ ಇರುತ್ತಾರೆ..' ಎಂದಳು ರಮ್ಯ.

'ನಿಮ್ಮ ತಂದೆ ಎಲ್ಲಿದ್ದಾರೆ, ಏನು ಮಾಡುತ್ತಿದ್ದಾರೆ ರಮ್ಯ....'

ಪುರುಷೋತ್ತಮರ ಪ್ರಶ್ನೆಗೆ 'ನಂದಿಯಲ್ಲಿ ಯೋಗ ಗುರುಗಳಾಗಿದ್ದಾರೆ ಅಂಕಲ್...' ಎಂದಳು ರಮ್ಯ.

ಇವರೆಲ್ಲರ ಸಂಭಾಷಣೆಗಳನ್ನು ಮೌನವಾಗಿ ಕೇಳಿಸಿಕೊಳ್ಳುತ್ತಿದ್ದರು ಕಲಾವತಿ. ಅವರಿಗೆ ಈ ದಿನ ಹಿಡಿಸಲಾರದಷ್ಟು ಸಂತೋಷವಾಗಿತ್ತು. ಭರತ ಮೂಲೆ ಹಿಡಿದು ಕುಳಿತ ಮೇಲೆ ಎರಡು ವರ್ಷಗಳಿಂದ ಬಂಗಲೆಯಲ್ಲಿ ಕುಳಿತು ಕೊರಗುವುದೇ ಆಗಿತ್ತು. ಈ ದಿನ ಲಾಲ್‌ಬಾಗಿನ ಆಹ್ಲಾದಕರ ವಾತಾವರಣ ಮನಸ್ಸಿಗೆ ತಂಪೆರೆಯಿತು. ಕಣ್ಣು ಹಾಯಿಸಿದಲ್ಲೆಲ್ಲಾ ಹಸಿರು, ಚಳಿಗಾಲದಲ್ಲೂ ಅರಳುವ ವಿವಿಧ ಬಣ್ಣದ ಹೂವಿನ ಮರಗಳು, ಅಸಂಖ್ಯ ಪಕ್ಷಿಗಳ ಕಲರವ ಅವರ ಮನಸ್ಸನ್ನು ಮಂತ್ರಮುಗ್ಧಗೊಳಿಸಿತ್ತು.

ಪುರುಷೋತ್ತಮರೇ ಹೊತ್ತಾಯಿತೆಂದು ಎಲ್ಲರನ್ನೂ ಮೇಲೆಬ್ಬಿಸಬೇಕಾಯಿತು. ಎಲ್ಲರೂ ಮನಸ್ಸಿಲ್ಲದ ಮನಸ್ಸಿನಿಂದ ಮೇಲೆದ್ದರು.

ಹೊರಗೆ ಒಳ್ಳೆಯ ರೆಸ್ಟೋರೆಂಟ್ ಒಂದರಲ್ಲಿ ಊಟ ಮುಗಿಸಿ, ಸಂಜೆ ಗುಹಾಂತರ ದೇವಾಲಯವಾದ ಗವಿಗಂಗಾಧರೇಶ್ವರ ದೇವಾಲಯವನ್ನು ನೋಡಿದರು. ಗಂಗಾಧರ ಲಿಂಗರೂಪಿಯಾಗಿ ಗವಿಯೊಳಗೆ ದರ್ಶನ ಕೊಡುತ್ತಿದ್ದ ದೃಶ್ಯ ಅನುಪಮವಾಗಿತ್ತು.

'ಈ ದೇವಾಲಯಕ್ಕೊಂದು ವಿಶೇಷವಿದೆ, ಮಕರ ಸಂಕ್ರಾಂತಿಯ ದಿನ ಸೂರ್ಯಾಸ್ತಮಾನದ ಕಾಲದಲ್ಲಿ ಸೂರ್ಯನ ಕಿರಣಗಳು ಗರ್ಭಗುಡಿಯ ಬಾಗಿಲಿನಿಂದ ಹಾದು ಲಿಂಗವನ್ನು ಸ್ಪರ್ಶಿಸಿ ಬೆಳಕಿನ ಆರತಿಯನ್ನು ಮಾಡುತ್ತವೆ, ಇದೊಂದು ರೀತಿಯ ಅಚ್ಚರಿ...' ಪುರುಷೋತ್ತಮರು ವಿವರಿಸಿದರು.

'ನಂಗಂತೂ ತುಂಬಾ ಖುಷಿಯಾಯ್ತು ಖುಷಿ, ಇಲ್ಲಿ ಎಷ್ಟೇ ಅಮ್ಯೂಸ್‌ಮೆಂಟ್ ಪಾರ್ಕ್‌ಗಳು, ರೆಸಾರ್ಟ್‌ಗಳು ಬಂದ್ರೂ ನಮ್ಮ ಲಾಲ್‌ಬಾಗ್, ಕಬ್ಬನ್‌ಪಾರ್ಕ್‌ನಂತಹ ಸಹಜ ಸೌಂದರ್ಯದ, ನಮ್ಮದೇ ಐತಿಹಾಸಿಕ ತಾಣಗಳು ಕೊಡುವ ಸಂತೋಷವೇ ಬೇರೆ...' ಎಂದರು ಕಲಾವತಿ.

ಅದು ಅವರೊಬ್ಬರ ಮಾತುಗಳಷ್ಟೇ ಆಗಿರದೆ ನಾಡು, ನುಡಿಯೆಂದು ತುಡಿಯುವ ಪ್ರತಿಯೊಬ್ಬರ ಮಾತುಗಳೂ ಆಗಿದ್ದವು.

ಆಗಲೇ ಕತ್ತಲಾವರಿಸುತ್ತಿತ್ತು. ತುಂಬು ಉತ್ಸಾಹದಿಂದ ಕೋಟೆ ಬಂಗಲೆಯನ್ನು ತಲುಪಿದವರಿಗೆ ಆಘಾತವೊಂದು ಕಾದಿತ್ತು!.....ಅದನ್ನು ನೋಡುತ್ತಲೇ ಕಿಟಾರೆಂದು ಕಿರುಚಿಕೊಂಡಳು ಖುಷಿ....

13

## ಸಂಪಿಗೆ ಮರಕ್ಕೆ ಬೆಂಕಿ

ಎದುರಿಗೆ ಕಂಡ ದೃಶ್ಯದಿಂದ ಖುಷಿ ಭಯಭೀತಳಾಗಿ ಕಿರುಚಿಕೊಂಡಿದ್ದಳು. ಕೋಟೆ ಬಂಗಲೆಯ ಎಡಭಾಗದಲ್ಲಿದ್ದ ದೊಡ್ಡ ಸಂಪಿಗೆ ಮರವೊಂದು ಬೆಂಕಿಗೆ ಆಹುತಿಯಾಗಿ ಧಗಧಗಿಸುತ್ತಿತ್ತು. ಯಾರೋ ಅಗ್ನಿಶಾಮಕ ದಳದವರಿಗೂ ವಿಷಯ ತಿಳಿಸಿರಬೇಕು, ದಳದ ಕೆಲವು ಸಿಬ್ಬಂದಿ ಬೆಂಕಿಯನ್ನು ನಂದಿಸುತ್ತಿದ್ದರು.

'ಏನಾಯ್ತು ಚಂದ್ರಪ್ಪ....' ಬಂಗಲೆಯ ಗೇಟಿನ ಮುಂದೆ ತಲೆಯ ಮೇಲೆ ಕೈ ಹೊತ್ತು ಕುಳಿತಿದ್ದ ಚಂದ್ರಪ್ಪನನ್ನು ಕೇಳಿದರು ಪುರುಷೋತ್ತಮ್.

'ಅಯ್ಯ....ಮಧ್ಯಾಹ್ನ ಮನೆಯಲ್ಲಿ ಊಟ ಮಾಡಿ ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದು ಗೇಟಿನ ಸಮೀಪ ಬರುವಾಗಲೇ ಎಂಥದೋ ಕಮಟು

### ಫ್ರೀಡಂ ಫೈಟರ್ಸ್

ಮದುವೆಯ
ನಂತರ
ಎಲ್ಲ
ಗಂಡಸರು
'ಸ್ವಾತಂತ್ರ್ಯ
ಹೋರಾಟಗಾರರು!

★ ನರಸಿಂಹ ಪೈ

